**ದಿನಾಂಕ 06.01.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ ವಿ.ಎಸ್.ಆರ್. ವಕೀಲರಿಂದಃ**

1. ನನ್ನ ತಂದೆ ಅವಿದ್ಯಾವಂತರಾದ ಕಾರಣ ಅವರು ಸಹಿಯನ್ನು ಮಾತ್ರ ಮಾಡುತ್ತಾರೆ ಅದೇ ಕಾರಣದಿಂದ ಜಿ.ಪಿ.ಎ. ಬರೆದುಕೊಟ್ಟಿದ್ದಾರಾ ಎಂದರೆ ಸಾಕ್ಷಿಯು ಅವರಿಗೆ ಆರೋಗ್ಯ ಸಮಸ್ಯೆ ಇರುವ ಕಾರಣ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಅವರಿಗೆ ಹೃದಯದ ಶಸ್ತ್ರ ಚಿಕಿತ್ಸೆಯಾಗಿದೆ, ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುತ್ತೇನೆ. 2009-10 ನೇ ಸಾಲಿನ ಪಹಣಿಯು ದಾವಾ ಸಲ್ಲಿಸುವ ಸಮಯದ ಪಹಣಿ ಅಲ್ಲ ಎಂದರೆ ಸಾಕ್ಷಿಯು ಪಹಣಿ ಪತ್ರಿಕೆಯು ಈ ಮೊದಲು ಮುಂಚಿನ ಮಾಲೀಕರ ಹೆಸರಿನಲ್ಲಿ ಬರುತ್ತಿತ್ತು ಎಂದು ನುಡಿಯುತ್ತಾರೆ. 2016 ರಿಂದ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಏನೂ ತೊಂದರೆ ಇರಲಿಲ್ಲ ಎಂದರೆ ಸರಿ, ಲಭ್ಯವಿದ್ದ ದಾಖಲಾತಿಯನ್ನು ಕೊಟ್ಟಿದ್ದೇನೆ. 2016 ರ ಕಾಲಕ್ಕೆ ದಾವಾ ಆಸ್ತಿಯು ಸರ್ವೆ ನಂ.92 ಆಗಿ ಉಳಿದಿರಲಿಲ್ಲ, 92/1 ರಿಂದ 92/3 ಆಗಿ ಪೋಡಾಗಿತ್ತು ಎಂದರೆ ಸರಿ.
2. ಉದ್ದೇಶಪೂರ್ವಕವಾಗಿಯೇ ನಾನು ಪೋಡಾಗಿರುವ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ, ಕೊಟ್ಟಿದ್ದೇನೆ. 2015 ನೇ ಸಾಲಿನಿಂದಲೂ ಪ್ರತಿವಾದಿ ಸಂಖ್ಯೆ 12 ರಾಮಕೃಷ್ಣಪ್ಪ ರವರ ಹೆಸರಿನಲ್ಲಿ 92/1 ಮತ್ತು 92/2 ರ ಪಹಣಿ ಬರುತ್ತಿದೆ ಎಂದರೆ ಸರಿ. 92/3 ರ ಜಮೀನು ಪ್ರತಿವಾದಿ ಸಂಖ್ಯೆ 11 ಸಣ್ಣಮ್ಮನವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ, ಪೋಡಾಗಿರುವ ಕಾರಣ ಬರುತ್ತಿದೆ. 11 ಮತ್ತು 12 ನೇ ಪ್ರತಿವಾದಿಗಳು ತುಮಕೂರಿನ ಡಿ.ಸಿ.ಸಿ. ಬ್ಯಾಂಕಿನಲ್ಲಿ 10 ಲಕ್ಷ ರೂಪಾಯಿಗಳಿಗೆ 2015-16 ನೇ ಸಾಲಿನಲ್ಲಿ ದಾವಾ ಸರ್ವೆ ನಂ. 92/1 ರಿಂದ 3 ನ್ನು ಅಡಮಾನ ಮಾಡಿದ್ದಾರೆ ಎಂದರೆ ಸಾಕ್ಷಿಯು ದಾವೆ ಸಲ್ಲಿಸಿದ ನಂತರ ಮಾಡಿದ್ದಾರೆ ಎಂದು ನುಡಿಯುತ್ತಾರೆ.
3. ಎಂ.ಆರ್. ಸಂಖ್ಯೆ 330/2015-16 ರಂತೆ ನೊಂದಣಿ ಅಡಮಾನ ಪತ್ರವನ್ನು ಡಿ.ಸಿ.ಸಿ. ಬ್ಯಾಂಕಿಗೆ ಮಾಡಿಕೊಡಲಾಗಿದೆ ಎಂದರೆ ಸರಿ. ಪ್ರತಿವಾದಿ ಸಂಖ್ಯೆ 12 ರಾಮಕೃಷ್ಣಪ್ಪನವರಿಗೆ 92/1 ನೇ ಸರ್ವೆ

ನಂಬರ್ ದಿನಾಂಕ 29.10.2015 ರಂತೆ 2 ಎಕರೆ 4.8 ಗುಂಟೆ ಜಮೀನು ಕ್ರಯ ಪತ್ರದ ಮುಖಾಂತರ ತೆಗೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ನಮಗೆ ಸದರಿ ಆಸ್ತಿಯನ್ನು ನೊಂದಣಿ ಕ್ರಯ ಮಾಡಿಕೊಟ್ಟ ನಂತರ ಜಿಪಿ.ಎ. ಆಧಾರದ ಮೇಲೆ ಮತ್ತೆ ಅವರೇ ಕ್ರಯ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 28.12.2015 ರಂತೆ ಸರ್ವೆ ನಂ.92/2 ರ ಆಸ್ತಿಯು ರಾಮಕೃಷ್ಣಪ್ಪರವರಿಗೆ ಕ್ರಯವಾಗಿದೆ ಎಂದರೆ ಸಾಕ್ಷಿಯು ನಮಗೆ ಸದರಿ ಆಸ್ತಿಯನ್ನು ನೊಂದಣಿ ಕ್ರಯ ಮಾಡಿಕೊಟ್ಟ ನಂತರ ಜಿಪಿ.ಎ. ಆಧಾರದ ಮೇಲೆ ಮತ್ತೆ ಅವರೇ ಕ್ರಯ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 23.06.2015 ರಂದು ಸರ್ವೆ ನಂ.92/3 ರ 3 ಎಕರೆ 8 ಗುಂಟೆಯ ಆಸ್ತಿಯು ಸಣ್ಣಮ್ಮನಿಗೆ ಕ್ರಯವಾಗಿದೆ ಎಂದರೆ ಸಾಕ್ಷಿಯು ಸರ್ವೆ ನಂ92 ಒಟ್ಟು ವಿಸ್ತೀರ್ಣ 7 ಎಕರೆ 17 ಗುಂಟೆಯಾಗಿದ್ದು ಅದನ್ನು ಮೊದಲು ನಮಗೆ ಮಾರಾಟ ಮಾಡಿ ಕ್ರಯ ಮಾಡಿಕೊಟ್ಟಿದ್ದು ಪೋಡಿಯಾದ ನಂತರ ಜಿಪಿ.ಎ ಮುಖಾಂತರ ಮತ್ತೆ ಅವರೇ ಕ್ರಯ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

4. ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾವಾ ಆಸ್ತಿಯು ಸರ್ವೆ ನಂ.92 ಆಗಿ ಉಳಿದಿರಲಿಲ್ಲ ಎಂದರೆ ಸರಿ, ಆದಕಾರಣ ನಾನು ಕೇಳಿರುವ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ದಾವೆಯನ್ನು ನಾನು ಕ್ರಯ ಪತ್ರವನ್ನು Cancel ಮಾಡುವ ಪರಿಹಾರವನ್ನು ಕೇಳಿ ಸಲ್ಲಿಸಿದ್ದೇನೆ. ಹಾಗಿದ್ದಲ್ಲಿ ನಮಗೆ ತಿದ್ದುಪಡಿ ಕ್ರಯ ಪತ್ರ ಮಾಡಿಸಿಕೊಳ್ಳುವ ಅವಶ್ಯಕತೆ ಇಲ್ಲ ಎಂದರೆ ಸಾಕ್ಷಿಯು ತಿದ್ದುಪಡಿ ಅಥವಾ ಕ್ರಯಪತ್ರ ಮಾಡಿಕೊಡಬೇಕೆಂದು ಪರಿಹಾರ ಕೇಳಿದ್ದೇವೆ.

ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**